(ಸಭೆಯು ಬೆಳಿಗ್ಗೆ 11 ಗಂಟೆ 15 ನಿಮಿಷಕ್ಕೆ ಗಂಟೆಗೆ ಪ್ರಾರಂಭಗೊಂಡಿತು ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನಲಂಕರಿಸಿದರು)

ಅಧ್ಯಕ್ಷರು: ಒಂದು ಪ್ರಕಟಣೆ ಇದೆ.

ಪ್ರಕಟಣೆ

ದಿನಾಂಕ: 21.07.2014 ರಂದು ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ ಸದನದ ಸದಸ್ಯರಾಗಿರುವ ಶ್ರೀ ಮನೋಹರ್ ಹೆಚ್. ತಹಸೀಲ್ದಾರ್ ಮತ್ತು ಶ್ರೀ ನಾರಾಯಣ ಗೌಡ ಇವರುಗಳಿಗೆ ಜನ್ಮ ದಿನದ ಶುಭಾಶಯಗಳು. ಈ ಸಂದರ್ಭದಲ್ಲಿ ಭಗವಂತನ್ನು ತಮಗೆ ಆಯುರಾರೋಗ್ಯವನ್ನು ಹಾಗೂ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

ವಿಷಯ: ಕಾವೇರಿ ಅಚ್ಚುಕಟ್ಟಿನಲ್ಲಿ ಹೇಮಾವತಿ ಕೆ.ಆರ್.ಎಸ್. ಮತ್ತು ಹಾರಂಗಿ ಜಲಾಶಯಗಳಿಂದ ತಮಿಳುನಾಡಿಗೆ ನೀರು ಬಿಡುತ್ತಿರುವ ಬಗ್ಗೆ.

ಕೆ.ಆರ್.ಎಸ್ ಮತ್ತು ಹಾರಂಗಿ ಜಲಾಶಯಗಳಿಂದ ತಮಿಳುನಾಡಿಗೆ ನೀರನ್ನು ಬಿಡುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವತ್ತು ನಿಯಮ 69ರ ಅಡಿಯಲ್ಲಿ ಅತ್ಯಾಚಾರ ಮತ್ತು ಲೈಗಿಂಕ ದೌರ್ಜನ್ಯದ ಬಗ್ಗೆ ಅಜೆಂಡಾದಲ್ಲಿ ಚರ್ಚೆಗೆ ಇಟ್ಟಿದ್ದೀರಿ. ಈ ವಿಷಯ ಮೊಟ್ಟ ಮೊದಲನೆಯದಾಗಿ ಚರ್ಚೆಯಾಗಬೇಕೆಂದು ನಮ್ಮ request ಇದೆ.

ಶ್ರೀ ಎನ್. ಚಲುವರಾಯಸ್ವಾಮಿ:– ಮಾನ್ಯ ಜಗದೀಶ್ ಶೆಟ್ಟರೆ, ಒಂದು ನಿಮಿಷ.